

# ಆಡದ ಮಾತಿನ ಹಿಂದೆ ಮೊರೆವ ಸಮುದ್ರ

ಗೌರಿ

**ಬಿರುಕುಗಳ ಜೊತೆಗೇ ಬದುಕನ್ನು ಇದ್ದ ಹಾಗೆಯೇ ಒಪ್ಪಿಕೊಂಡು ಬದುಕುವುದೇ ಗಾಯವನ್ನು ಮಾಯಿಸಿಕೊಳ್ಳುವ ವಿಧಾನ ಇರಬಹುದು ಎಂಬ ಅಮೂರ್ತ ಆಲೋಚನೆಯನ್ನು 'ಡೆಡ್ ಲಾಂಗ್ವೇಜಸ್' ಕಿರುಚಿತ್ರ ಹೊಳೆಯಿಸುತ್ತದೆ.**

ಅದೊಂದು ಮುಸ್ಸಂಜೆ. ಸಮುದ್ರದ ತೀರ. ಕೆಂಪೇರಿದ ಸೂರ್ಯ ಮುಳುಗುವ ಸಿದ್ಧತೆಯಲ್ಲಿದ್ದಾನೆ. ಗಾಳಿ ಬೀಸುತ್ತಿದೆ. ಅಲ್ಲಿ ದೂರದಲ್ಲೊಂದು ತಾಯಿಮಗು, ಇತ್ತ ವೃದ್ಧ ದಂಪತಿಗಳು ವಿಹಾರದ ಮೂಡಲ್ಲಿದ್ದಾರೆ. ಅತ್ತಲೊಂದು ಹೆಣ್ಣು ಸಮುದ್ರದ ದಡದಲ್ಲಿ ಚಿಪ್ಪು ಆಯ್ದುಕೊಳ್ಳುತ್ತಿದ್ದಾಳೆ.

ಮರಳಿನ ಮೇಲೆ ಅವರಿಬ್ಬರೂ ಕೂತಿದ್ದಾರೆ. ನಡುವಯಸ್ಸು ದಾಟಿದೆ. ಅವರಿಬ್ಬರು ಬಹುಕಾಲದ ಸ್ನೇಹಿತರು. ಅಷ್ಟೇ ಅಲ್ಲ, ಬಹುಕಾಲದ ಹಿಂದೆಯೇ ಸ್ನೇಹವನ್ನು ಮುರಿದು ಬೇರಾದವರು. ಈಗ ಅಲ್ಲಿ ಕೂತು ತಮ್ಮ ಬದುಕಿನ ಕಡೆಗೆ ಹಿಂದುನೋಟವನ್ನು ಬೀರುತ್ತಿದ್ದಾರೆ. ಈ ನೋಟದಲ್ಲಿ ಆತ್ಮಸಮರ್ಥನೆಯ ಧಾಟಿಯೂ ಇದೆ. ಆದರೆ ಆ ಸಮರ್ಥನೆ ಪೊಳ್ಳು ಎನ್ನುವುದೂ ಅವರಿಗೆ ತಿಳಿದಿದೆ. ಸ್ನೇಹ ಮುರಿಯಲು ನನ್ನ ಪಾಲೆಷ್ಟು, ನಿನ್ನ ಪಾಲೆಷ್ಟು ಎಂಬ ಚರ್ಚೆಯಲ್ಲಿ ಎಷ್ಟೇ ನಿಯಂತ್ರಿಸಿಕೊಂಡರೂ ಎದುರಿನವನನ್ನು ಕಟಕಟೆಯಲ್ಲಿ ನಿಲ್ಲಿಸುವ ಪ್ರಯತ್ನ ಕಂಡೇ ಕಾಣುತ್ತದೆ.

ಮಾತು ಮತ್ತು ಕೃತಿ ಎರಡೂ ಒಂದೇ ಆಗುವುದು ಕೇವಲ ಆದರ್ಶದ ಸ್ಥಿತಿ ಮಾತ್ರವೇ? ಅನ್ಯರಿಗೆ ವಂಚಿಸುವುದಷ್ಟೇ ಅಲ್ಲ, ಆತ್ಮವಂಚನೆಯೂ ಮನುಷ್ಯನ ಮೂಲಭೂತ ಗುಣದಲ್ಲಿಯೇ ಸೇರಿಹೋಗಿದೆಯೇ? ಆಡುವ ಮಾತಿಗೂ ನಮ್ಮ ನಡವಳಿಕೆಗೂ ಸಣ್ಣ ಬಿರುಕು ಇದ್ದೇ ಇರುತ್ತದಲ್ಲ... ನಮ್ಮ ಜೊತೆಗೇ ಬದುಕು ಹಂಚಿಕೊಂಡವರಿಗೂ ಅನುದಿನದ ಒಡನಾಡಿಗಳಿಗೂ ಬಹುಸೂಕ್ಷ್ಮವಾಗಿ ನಾವು ವಂಚಿಸುತ್ತಲೇ ಇರುತ್ತೇವಲ್ಲ... ಈ ಬಿರುಕಿಗೆ ಹೊಲಿಗೆ ಹಾಕುವುದೆಂತು? ಈ ದ್ವಿಮುಖವನ್ನು ಕೂಡಿಸುವುದು ಹೇಗೆ? ಪಾರದರ್ಶಕತೆ ಎನ್ನುವುದು ಕೊನೆಗೂ ಬರಿಯ ಬಡಬಡಿಕೆ ಮಾತ್ರವೇ? – ಸ್ನೇಹಿತರಿಬ್ಬರ ಮಾತುಕತೆಯ ಮೂಲಕವೇ ಈ ಎಲ್ಲ ಪ್ರಶ್ನೆಗಳು ಹುಟ್ಟಿಸುವ ಹಾಗೆ ಮಾಡುತ್ತದೆ 'ಡೆಡ್ ಲಾಂಗ್ವೇಜಸ್' ಕಿರುಚಿತ್ರ.



ಹೆಸರು: ಡೆಡ್ ಲಾಂಗ್ವೇಜಸ್
ನಿರ್ದೇಶನ: ನಿಕೊಲಸ್ ಡೌಟ್ರೆ
ಛಾಯಾಗ್ರಹಣ: ಪೀಯರ್‌ಲುಗಿ ಮಲವಸಿ
ಸಂಗೀತ: ಫ್ರಾಂಕ್ ಡಿಲೋನ್
ತಾರಾಗಣ: ಜೋರ್ಡಿ ವಿಲಾಸುಸೋ, ಕ್ಲಿಂಟ್ ಜೇಮ್ಸ್

ಬರಿಯ ಮಾತಷ್ಟೇ ಅಲ್ಲ, ಇಡೀ ವಾತಾವರಣವನ್ನೇ ಒಂದು ಅನೂಹ್ಯ ಅನುಭವವಾಗಿ ದಾಟಿಸಲು ನಿರ್ದೇಶಕರು ಶ್ರಮಿಸಿರುವುದು ಎದ್ದುಕಾಣಿಸುತ್ತದೆ. ಮರಳಲ್ಲಿ ಕೂತ ಹೆಣ್ಣಿನ ಬಂಗಾರದ ಕೂದಲನ್ನು ಪುಟ್ಟ ಕಂದಮ್ಮ ನೇವರಿಸುವುದು, ದೂರದಲ್ಲಿ ಕೂತ ವೃದ್ಧ ದಂಪತಿಗಳ ಮುಖದಲ್ಲಿ ಸಾರ್ಥಕ ಭಾವ, ಅಲ್ಲೆಲ್ಲೋ ಚಿಪ್ಪು ಆರಿಸಿಕೊಳ್ಳುತ್ತಿರುವ ಹುಡುಗಿಯ ಜೊತೆಗಿನ ಸಮುದ್ರದ ಸಂಭಾಷಣೆ, ಎಲ್ಲವೂ ಮಾತಿಗೂ ಮೀರಿದ ವಿಚಿತ್ರ ಅನುಭವವನ್ನು ನಮ್ಮ ಮನಸೊಳಗೆ ಇಳಿಸುತ್ತವೆ. ಬದುಕಿನ ಹಲವು ಹಂತಗಳನ್ನು, ಮನಃಸ್ಥಿತಿಗಳನ್ನು ತೋರಿಸುವ ಅವರ ಎದುರು ಶಾಶ್ವತವೆಂಬಂತೆ ತೋರುವ ಸಮುದ್ರವಿದೆ. ಆಕಾಶದಲ್ಲಿ ಉರಿಯುವ ಸೂರ್ಯನಿದ್ದಾನೆ. ಬದುಕಿನ ನಶ್ವರಗುಣವನ್ನು ಕಾಣಿಸುತ್ತಲೇ ಅದರಲ್ಲಿ ಇರುವ ಜೀವಂತಿಕೆಯನ್ನೂ ಪ್ರತಿಫಲಿಸುತ್ತಾರೆ ನಿರ್ದೇಶಕರು.

ಹಿನ್ನೆಲೆ ಸಂಗೀತ ಇಡೀ ಚಿತ್ರಕ್ಕೆ, ಸಂಭಾಷಣೆಗಳಿಗೆ, ಇಮೇಜ್‌ಗಳ ಮೃದು ಪಲ್ಲಟಕ್ಕೆ ವಿಶೇಷ ಪ್ರಭೆಯನ್ನು ನೀಡಿದೆ. ಬದುಕಿನ ನೋವು, ದುಃಖ, ಅಗಾಧತೆ, ಕ್ಷಣಿಕಗುಣ, ವ್ಯಗ್ರಭಾವ, ವಿಷಾದ ಎಲ್ಲವನ್ನೂ ಛಾಯಾಗ್ರಹಣ ಬಹುಸೂಕ್ಷ್ಮವಾಗಿಯೂ, ಸಮರ್ಥವಾಗಿಯೂ ಸೆರೆಹಿಡಿದಿದೆ. ಕೊನೆಗೂ ಬದುಕು ಇರುವುದು ಹೀಗೆಯೇ. ಅದರ ಎಲ್ಲ ಬಿರುಕುಗಳ ಜೊತೆಗೇ ಅದನ್ನು ಇದ್ದ ಹಾಗೆಯೇ ಒಪ್ಪಿಕೊಂಡು ಬದುಕುವುದೇ ಗಾಯವನ್ನು ಮಾಯಿಸಿಕೊಳ್ಳುವ ವಿಧಾನವಿರಬಹುದೇನೋ ಎಂಬ ಅಮೂರ್ತ ಆಲೋಚನೆಯನ್ನೂ ಈ ಕಿರುಚಿತ್ರ ಮನಸೊಳಗೆ ಬಿತ್ತುತ್ತದೆ. ■

ಈ ಕಿರುಚಿತ್ರ ವೀಕ್ಷಣೆಗೆ https://bit.ly/3aJPN5y ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.